# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 834 (927)

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ದಿನಾಂಕ : 11.03.2026

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಸರ್ಕಾರಿ ಭೂಮಿಗಳ ರಕ್ಷಣೆ, ವಿಲೇವಾರಿ ಜವಾಬ್ದಾರಿ ಹಾಗೂ ಇತರೆ ಎಲ್ಲಾ ಭೂಮಿಗಳ ಹಕ್ಕು ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಕಂದಾಯ ಅಥವಾ ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವುದೇ; (ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಸರ್ಕಾರಿ ಭೂಮಿಗಳ ರಕ್ಷಣೆ, ಪಹಣಿ (RTC) ನಿರ್ವಹಣೆ ಮತ್ತು ಇತರ ಎಲ್ಲ ಭೂಮಿಗಳ ಹಕ್ಕು ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಪ್ರಮುಖವಾಗಿ ಕಂದಾಯ ಇಲಾಖೆಗೆ ಸೇರಿದ್ದಾಗಿದೆ. ಅರಣ್ಯ ಪ್ರದೇಶವೆಂದು ಅಧಿಸೂಚನೆ ಹೊರಡಿಸಿದ ಭೂಮಿಗಳು ಮಾತ್ರ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. |
| ಆ | ಅದೇ ರೀತಿ ಸರ್ಕಾರಿ ಭೂಮಿಗಳ ಲಭ್ಯತೆ ಮತ್ತು ವಿಲೇವಾರಿ ಮಾಹಿತಿಯು ಕಂದಾಯ ಇಲಾಖೆಯು ನಿರ್ವಹಿಸುವ ಮ್ಯುಟೇಷನ್ ಮತ್ತು ಪಹಣಿ ದಾಖಲೆಗಳನ್ನು ಹೊರತುಪಡಿಸಿ ಅರಣ್ಯ ಇಲಾಖೆಯ ದಾಖಲೆಗಳಿಂದ ತಿಳಿಯಬಹುದೇ; | ಹೌದು, ಕಂದಾಯ ಇಲಾಖೆಯು ಸರ್ಕಾರಿ ಭೂಮಿಗಳ ಲಭ್ಯತೆ ಮತ್ತು ವಂಶಾವಳಿ ಮಾಹಿತಿಯನ್ನು ನಿರ್ವಹಿಸುತ್ತದೆ. ಅರಣ್ಯ ಇಲಾಖೆಯ ವಶದಲ್ಲಿರುವ ಕಾಯ್ದಿರಿಸಿದ ಅರಣ್ಯಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸರ್ಕಾರಿ ಜಮೀನುಗಳ ಪಹಣಿ ಮತ್ತು ಮ್ಯುಟೇಷನ್ ದಾಖಲೆಗಳನ್ನು ಕಂದಾಯ ಇಲಾಖೆಯೇ ನಿರ್ವಹಿಸುತ್ತದೆ. |
| ಇ | ಕಂದಾಯ ಇಲಾಖೆಯಲ್ಲಿರುವ ಸರ್ಕಾರಿ ಭೂಮಿಗಳನ್ನು ಅರಣ್ಯ ಉದ್ದೇಶಕ್ಕೆ ಸರ್ಕಾರದ ಮಟ್ಟದಲ್ಲಿ ಅರಣ್ಯ ಇಲಾಖೆಯಿಂದ ಕರ್ನಾಟಕ ಅರಣ್ಯ ಕಾಯ್ದೆ 1963ರ ಅಧ್ಯಾಯ 2 ಮತ್ತು 3 ರಡಿ ಅಧಿಸೂಚನೆ ಹೊರಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಂದಾಯ ಇಲಾಖೆಯಲ್ಲಿರುವ ಸರ್ಕಾರಿ ಭೂಮಿಗಳನ್ನು ಅರಣ್ಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಕರ್ನಾಟಕ ಅರಣ್ಯ ಕಾಯ್ದೆ 1963ರ ಅಧ್ಯಾಯ 2 ಮತ್ತು 3ರ ಅಡಿಯಲ್ಲಿ ಅಧಿಸೂಚನೆ ಹೊರಡಿಸುವ ಅಧಿಕಾರ ಸರ್ಕಾರಕ್ಕಿದೆ. |
| ಈ | ಭೂಕಂದಾಯ ಕಾಯ್ದೆ 1964 ರ ಕಲಂ 71 ರಡಿ ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಅರಣ್ಯ ಉದ್ದೇಶಕ್ಕೂ ಸೇರಿದಂತೆ ವಿಸ್ತೀರ್ಣ ಮಿತಿ ಇಲ್ಲದೇ ಅರಣ್ಯ ಉದ್ದೇಶಕ್ಕೆ ಸರ್ಕಾರಿ ಜಮೀನನ್ನು ಕಾಯ್ದಿರಿಸಲು ಜಿಲ್ಲಾಧಿಕಾರಿ ಗಳಿಗೆ ಅಧಿಕಾರವಿರುವುದು ನಿಜವೇ; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 71ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ (ಅರಣ್ಯ ಉದ್ದೇಶವೂ ಸೇರಿದಂತೆ) ಭೂಮಿಯನ್ನು ಕಾಯ್ದಿರಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. |

| | | |
|---|---|---|
| ಉ | ಸರ್ಕಾರಿ ಭೂಮಿಯನ್ನು ಈ ರೀತಿ ಒಂದೇ ಉದ್ದೇಶಕ್ಕೆ 2 ಕಾಯ್ದೆಗಳಡಿ 2 ಇಲಾಖೆಗಳಿಗೆ ಕಾಯ್ದಿರಿಸಿರುವ ಅಧಿಕಾರ ನೀಡಿರುವುದು ಅಲ್ಲದೆ ಕಂದಾಯ ಇಲಾಖೆಯ ಅಧೀನದ ಭೂಮಿಗಳನ್ನು ಅರಣ್ಯ ಇಲಾಖೆ ವತಿಯಿಂದ ಅರಣ್ಯ ಕಾಯ್ದೆಯಡಿ ಸರ್ಕಾರದ ಮಟ್ಟದಲ್ಲಿ ಅಧಿಸೂಚನೆ ಹೊರಡಿಸುವುದರಿಂದ ಕಂದಾಯ ಇಲಾಖೆಯ ಹಕ್ಕು ದಾಖಲೆಗಳು ಕಾಲ ಕಾಲಕ್ಕೆ ಅಪ್ ಡೇಟ್ ಆಗದೇ ಗೊಂದಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಗೊಂದಲವನ್ನು ಸರಿಪಡಿಸುವ ವಿಚಾರದಲ್ಲಿ ಸರ್ಕಾರದ ನಿಲುವೇನು; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 71 ರಡಿ ಸರ್ಕಾರಿ ಜಮೀನುಗಳನ್ನು ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಅವಕಾಶವಿರುತ್ತದೆ. ಅರಣ್ಯ ಇಲಾಖೆಗೆ ಕಾಯ್ದಿರಿಸಿದ ಪ್ರದೇಶಗಳ ಪೈಕಿ ಕೆಲವು ಪ್ರಕರಣಗಳು ಕಂದಾಯ ಇಲಾಖೆಯ ದಾಖಲೆಗಳಲ್ಲಿ ಇಂಡೀಕರಣವಾಗಿರುವುದಿಲ್ಲ. ಇಂಡೀಕರಣವಾಗದ ಪ್ರಕರಣಗಳಲ್ಲಿ ಅರಣ್ಯ ಇಲಾಖೆಯವರು ಸಲ್ಲಿಸುವ ಮಾಹಿತಿಯನ್ನು ಆಧರಿಸಿ ಇಂಡೀಕರಣ ಕ್ರಮ ವಹಿಸಲಾಗುತ್ತಿದೆ. ಅಲ್ಲದೆ ಈ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ಕಂದಾಯ ಮತ್ತು ಅರಣ್ಯ ಇಲಾಖೆಯ ಗಡಿಗಳನ್ನು ಗುರುತಿಸಿ ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ ಕ್ರಮವಹಿಸಲಾಗುತ್ತದೆ. |
| ಊ | ಸರ್ಕಾರಿ ಭೂಮಿಯನ್ನು ಅರಣ್ಯಕ್ಕಾಗಿ ಕಾಯ್ದಿರಿಸುವ ಅಧಿಕಾರವನ್ನು ಯಾವುದಾದರೂ ಒಂದು ಇಲಾಖೆಗೆ ವಹಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? | ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 38 ಎಲ್‌ಜಿಕ್ಯೂ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು